
ಇದುವರೆಗೆ ನೀನು ಬಹಿರ್ಮಂಡಲವನ್ನು ಗೆದ್ದಿರುವುದು ನಿಜ. ಆದರೆ ಈಗ ಅಂತರ್ಮಂಡಲವನ್ನು ಶೋಧಿಸಬೇಕಿದೆ. ನಿನಗೆ ಶತ್ರುಗಳಿದ್ದಾರೆಂಬುದನ್ನು ಚಕ್ರರತ್ನ ಸೂಚಿಸುತ್ತಿದೆ ಎಂದು ತಿಳಿಸುತ್ತಾರೆ. ನಿನ್ನ ಸಹೋದರರು ಮಹೋನ್ನತರು; ಅವರು ಅಷ್ಟು ಸುಲಭವಾಗಿ ನಿನಗೆ ತಲೆಬಾಗುವುದಿಲ್ಲ ಎಂದಾಗ ಭರತ ಕೋಪಾವಿಷ್ಟನಾಗುತ್ತಾನೆ. ದೂತನ ಮೂಲಕ ಎಲ್ಲರಿಗೂ ನಿರೂಪವನ್ನು ಕಳುಹಿಸುತ್ತಾನೆ. 'ನನಗೊಬ್ಬನಿಗೇ ಈ ಭೂಸಾಮ್ರಾಜ್ಯ ಉಪಭೋಗಾರ್ಹವಲ್ಲ, ಇದು ನಿಮಗೂ ಸಂಬಂಧಪಟ್ಟದ್ದೇ. ಹಿರಿಯಣ್ಣನೇನು, ತಂದೆಯೇನು—ಇಬ್ಬರೂ ಸಮಾನರು ಎಂಬ ಸದ್ಬುದ್ಧಿಯಿಂದ ಅವನಲ್ಲಿ ವಿನಯವನ್ನು ತಳೆಯಿರಿ. ನಾನೂ ನೀವೂ ಒಡನಿದ್ದುಕೊಂಡು ಬಾಳೋಣ ಎಂಬ ರಾಜನ ಆಜ್ಞೆಯನ್ನು ತಲೆಯಲ್ಲಿ ಹೊತ್ತು ಚಕ್ರೇಶನಾದ ಭರತನ ಪಾದಪದ್ಮಗಳಿಗೆರಗಲು ಬನ್ನಿರಿ' ಎಂದು ನುಡಿದ ದೂತನ ಮಾತುಗಳನ್ನು ಕೇಳಿದ ಸಹೋದರರು ಭರತನಿಗೆ ಮಣಿಯುವುದಿಲ್ಲ. ಅವರಿಗೆ ಭರತನ ಬಗ್ಗೆ ಗೌರವವಿದೆ. ಆದರೆ ಅವನ ಸರ್ವಾಧಿಕಾರಿ ಧೋರಣೆ ಹಿಡಿಸುವುದಿಲ್ಲ:

ಪಿರಿಯಣ್ಣಂ ಗುರು ತಂದೆಯೆಂದೆಱಗುವಂ ಮುನ್ನೆಲ್ಲಮಿಂತೀಗಳಾ
ಳರಸೆಂಬೊಂದು ವಿಭೇದಮಾದೊಡೆಱಕಂ ಚಿಃ ಕಷ್ಟಮಲ್ತೇ ವಸುಂ
ಧರೆಗಯ್ಯಂ ದಯೆಗೆಯ್ಯೆ ಮುಂ ಪಡೆದುದರ್ಕಿಂತೀತನೊಳ್ ತೊಟ್ಟ ಕಿಂ
ಕರಭಾವಂ ನಮಗಕ್ಕಿಗೊಟ್ಟು ಮಡಗೂೞುಣ್ಬಂದಮಂ ಪೋಲದೇ

ಭರತ ಹಿರಿಯಣ್ಣ, ಗುರು ಎಂದು ನಮಸ್ಕರಿಸುವುದೇನೋ ಸರಿ. ಈಗ ಆತ ಆಳು, ಅರಸು ಎಂಬ ಭೇದಭಾವವನ್ನು ಉಂಟುಮಾಡಿರುವುದರಿಂದ ಅವನಲ್ಲಿ ಸ್ನೇಹವನ್ನು ಹೇಗೆ ತೋರಿಸುವುದು? ಈ ಭೂಮಿಯನ್ನು ತಂದೆ ಕೊಟ್ಟಿರುವುದರಿಂದ ಅದನ್ನು ನಾವು ಪಡೆದಿದ್ದೇವೆ. ನಾವು ಭರತನಲ್ಲಿ ಕಿಂಕರ ಭಾವ ತೋರಿದರೆ 'ನಾವೇ ಅಕ್ಕಿಯನ್ನು ಕೊಟ್ಟು, ಅವನು ತಿಂದುಮಿಕ್ಕ ಎಂಜಲನ್ನು ಉಂಡಂತಾಗುವುದಿಲ್ಲವೇ?' ಎಂದು ತಮ್ಮಲ್ಲಿಯೇ ಆಲೋಚಿಸಿದರು. ಪುರುದೇವನ ಮಕ್ಕಳಾದ ನಾವು ಪುರುಷಾರ್ಥವನ್ನು ಉಜ್ವಲಗೊಳಿಸಬೇಕೆಂದು ಭಾವಿಸಿ, ರಾಜ್ಯವನ್ನು ತ್ಯಾಗಮಾಡಲು ನಿಶ್ಚಯಿಸಿದರು. ಭರತನಿಗೆ ಎರಗುವುದು ದೊಡ್ಡ ಅವಮಾನವೆಂದು ಭಾವಿಸಿ, ಅಷ್ಟು ಮಂದಿಯೂ ತಪೋನಿರತರಾಗುವರು.

ಕೊನೆಗೆ ಉಳಿಯುವವನು ಬಾಹುಬಲಿ ಮಾತ್ರ. ತನ್ನ ಎಲ್ಲಾ ಅನುಜರು ನಿರ್ವೇಗಪರರಾದುದನ್ನು ಕೇಳಿ ಬೆಚ್ಚಿದ ಭರತ, ಬಾಹುಬಲಿಯನ್ನು ಮಣಿಸಲು ಯೋಚಿಸುತ್ತಾನೆ. ಬಾಹುಬಲಿಗೆ ಮಹತ್ತರನ ಮೂಲಕ ಆಜ್ಞಾಪತ್ರವನ್ನು ಕಳುಹಿಸುತ್ತಾನೆ. ಅತ್ಯಂತ ದಿಟ್ಟ ಸ್ವಾಭಿಮಾನಿಯಾದ ಬಾಹುಬಲಿ ಸಂಧಿ ವಿಗ್ರಹಿಯಿಂದ ಭರತನ ರಾಜ್ಯಾಡಳಿತ, ಯೋಗಕ್ಷೇಮವನ್ನು ವಿಚಾರಿಸಿ, ಅರಸನಿಗೆ ಯಶಸ್ಸು ಎಂಬುದೇ ಧನ, ಅದನ್ನು ಹಾಳುಮಾಡಿಕೊಂಡು ಸಂಪಾದಿಸಿದ್ದು ಎಂತಹ ಧನ! ಆದ್ದರಿಂದ ತನ್ನ ರಾಜ್ಯವನ್ನು ಯುದ್ಧದಲ್ಲಿ ಗೆದ್ದು ಪಡೆಯಬೇಕೆಂದು ಹೇಳಿ ಕಳುಹಿಸುತ್ತಾನೆ:

ಪಿರಿಯಣ್ಣಂಗೆಱಗುವುದೇಂ । ಪರಿಭವಮೇ ಕೇಱಿ ನೆತ್ತಿಯೊಳ್ ಬಾಳಂ ನಿ
ರ್ನೆರಮೂಱಿ ಚಲದಿನೆಱಗಿಸ । ಲಿರೆ ಭರತಂಗೆಱಗುವೆಱಕಮಂಜಮೆಯಲ್ತೇ



ಹಿರಿಯಣ್ಣನಿಗೆ ತಲೆಬಾಗುವುದು ಅವಮಾನವೇನೂ ಅಲ್ಲ. ಆದರೆ ಅವನು ನೆತ್ತಿಯ ಮೇಲೆ ಕತ್ತಿಯಿಂದ ಗೀರಿ, ವಿನಾಕಾರಣವಾಗಿ ಛಲದಿಂದ ತಲೆಬಾಗಿಸಲು ಹೊರಟಿದ್ದಾನೆ.